ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಮೊಬೈಲ್‌ಗೂ, ಹೆಂಡತಿಗೂ ಏನು ವ್ಯತ್ಯಾಸ?



ಹೆಂಡತಿಯನ್ನು ಜೇಬಿಗೆ ಹಾಕಿಕೊಳ್ಳುವುದು ಬಹಳ ಕಷ್ಟ.

ಕೆ.ಎಂ. ವಿಭೂತಿ, ಹರಿಹರ
ಕೈ ಕೆಸರಾಗದೆ ಬಾಯಿ ಮೊಸರಾಗುವ ಯಾವುದಾದರೂ ಕಾಯಕ ಇದೆಯೆ?
ಹೂಂ. ಲಸ್ಸಿ ಬಾರ್‌ನಲ್ಲಿ ಟೇಸ್ಟರ್ ಕೆಲಸ.

ಮಾಲತೇಶ್ ಪಾಟೀಲ್, ಹುಬ್ಬಳ್ಳಿ
ಹಿಂದೆ ಮಾನವರಿಗೂ, ದಾನವರಿಗೂ ವ್ಯತ್ಯಾಸವಿತ್ತು. ಇಂದು ದಾನವರಾರೊ, ಮಾನವರಾರೊ?
ದಾನ ಬೇಡದವನು ಮಾನವ; ಮಾನ ಬೇಡವಾದವನು ದಾನವ.

ಪಿ. ಜಯವಂತ ಪೈ, ಕುಂದಾಪುರ
ಗನ್‌ಗೂ, ಪೆನ್‌ಗೂ ವ್ಯತ್ಯಾಸವೇನು?



ಗನ್‌ನಿಂದ ಶಿಕ್ಷೆ; ಪೆನ್‌ನಿಂದ ಶಿಕ್ಷಣ.

ವಸುಧಾ ಜೈಶಂಕರ್, ಬೆಂಗಳೂರು
ಕತ್ತೆಯಂತಹ ಅತ್ತೆ; ಮುತ್ತಿನಂತಹ ಗಂಡ, ಮಾವ, ಮಕ್ಕಳು ಹೇಗಿರಬೇಕು?
ಜಿರಾಫೆಯಂತಹ ಮಾವ, ಮೊಲದಂತಹ ಮಕ್ಕಳು.

ಅ. ಮೃತ್ಯುಂಜಯ, ಪಾಂಡವಪುರ
ನಂಬಿಕೆ ಎಂದರೆ ನಿಜವಾದ ಅರ್ಥ ಏನು ರಾಮ್?
ವಂಚಿತನಾಗುವುದಕ್ಕೆ ಮುಂಚಿನ ಮುಗ್ಧ ಸ್ಥಿತಿ.

ಬೂಕನಕೆರೆ ವಿಜೇಂದ್ರ, ಮೈಸೂರು
ಬಡವರು ಶ್ರೀಮಂತರಾಗುವುದು ಯಾವಾಗ?
ಇರುವುದರಲ್ಲೇ ತೃಪ್ತಿ ಕಂಡಾಗ.

ಸಿಹಿಮೊಗೆ ರಮೇಶ್, ಮೈಸೂರು
ಹರಸಾಹಸ ಎಂದರೇನು?
ದ್ವಿಪತ್ನಿಯರು, ಹಾವು, ಕೊರೆಯುವ ಚಳಿಯಲ್ಲೂ ನಗುತ್ತಾ ಬಾಳಲೆತ್ನಿಸುವುದು.

ಮಲ್ಲಿಕಾರ್ಜುನ, ಸುರಧೇನುಪುರ
ಪುಣ್ಯ ಕೋಟಿ; ಪಾಪ?
‘ಸಾವಿರಾರು ಕೋಟಿ’ ಎಂದನಾ ಹಗರಣಿ.

ಮೀನಾಕ್ಷಿ ರಾಮಗುಂಡಿ, ಬೈಲಹೊಂಗಲ
ಪಿತೃಪಕ್ಷ ಇದ್ದಂತೆ ಮಾತೃಪಕ್ಷವೂ ಇರಬಹುದೆ?
ಹೂಂ. ಮಮತಾ ಬ್ಯಾನರ್ಜಿ, ಜಯಲಲಿತಾರ ಪಕ್ಷಗಳು.

ಪೆಮ್ಮನಹಳ್ಳಿ ಚಿಕ್ಕಣ್ಣ, ಪಾವಗಡ
ಮಡದಿ ವಿಪರೀತ ಮುನಿಸಿಕೊಂಡಿದ್ದಾಳೆ. ಏನು ಮಾಡಲಿ?
ನೀವು ಏನೋ ಮಾಡಿದಿರಲ್ಲ, ಅದನ್ನು ಮಾಡುವುದಿಲ್ಲವೆಂದು ತಪ್ಪುದಂಡ ಕಟ್ಟಿ.

ರಾಜೇಂದ್ರ ಎ.ಆರ್. ಮಂಡ್ಯ
ಇಂದಿನ ರಾಜಕಾರಣಿಗಳಲ್ಲಿ ನೈತಿಕತೆ ಹುಡುಕುತ್ತಿದ್ದೇನೆ. ಸಹಾಯ ಮಾಡುವಿರಾ?
‘ನೈತಿಕತೆ’ಯ ಅರ್ಥದಷ್ಟನ್ನು ಒದಗಿಸುತ್ತೇನೆ – ಕತೆ.

ಶೇಖರಯ್ಯ ಟಿ.ಎಚ್.ಎಂ, ಗದ್ದಲಗಟ್ಟೆ
ಇತ್ತೀಚೆಗೆ ಒಳ್ಳೆಯವರಿಗೆ ಕಾಲವಿಲ್ಲ ಅಂತಾರಲ್ಲ, ನಿಜಾನಾ?
ಅವರಿಗೂ ಕಾಲವಿದೆ – ಕೇಡುಗಾಲ.

ಆಶಾ ಅಪ್ರಮೇಯ, ದಾವಣಗೆರೆ
ಕರೆಯೋಲೆಗಳಲ್ಲಿ ನಮ್ಮ ಹೆಸರು ಬರೆಯದೆ ‘ನಿಮ್ಮ ಹೆಸರು ನಮ್ಮ ಮನದಲ್ಲಿದೆ’ ಎಂದು ಮುದ್ರಿಸುವುದೇಕೆ?
‘ಅಪ್ರಮೇಯ’ ಅನ್ನು **Up Pra May ya** ಎಂದೆಲ್ಲ ತಪ್ಪಾಗಿ ಬರೆದು ನಗೆಪಾಟಲಾಗದಿರಲು.

## ಬಹುಮಾನಿತ ಪ್ರಶ್ನೆ

ಪಿ.ಜೆ. ರಾಘವೇಂದ್ರ, ಮೈಸೂರು
ಗಾಂಧಿ ಜಯಂತಿಯನ್ನು ಮಿಕ್ಕೆಲ್ಲ ಜಯಂತಿಗಳಂತೆ ಅದ್ದೂರಿಯಾಗಿ ಆಚರಿಸುವುದಿಲ್ಲವೇಕೆ?
ಬಹುತೇಕ ಕಾರ್ಯಕರ್ತರನ್ನು ತೃಪ್ತಿಪಡಿಸುವ ಮದ್ಯಕ್ಕೇ ನಿಷೇಧ ಇರುತ್ತದಲ್ಲ!

ರಾಜೀವ್. ಎನ್. ಮಾಗಲ್
ಹೊಸ ವರ್ಷದ ಸಂಭ್ರಮಾಚರಣೆಯನ್ನು ಫ್ರೀಡಮ್ ಪಾರ್ಕ್‌ನಲ್ಲಿ ಸುಸಜ್ಜಿತವಾಗಿ ಆಯೋಜಿಸಿದರೆ ಹೇಗಿರುತ್ತೆ ಸಾರ್?
ಅಲ್ಲಿರಬಹುದಾದ ಮಾಜಿ ಕ್ರಿಮಿನಲ್‌ಗಳ ಆತ್ಮಗಳಿಗೆ ಭೂತತೃಪ್ತಿ ಆಗುತ್ತದೆ.

ಕಾವ್ಯಶ್ರೀ, ಶೋರಾಪೂರ
ಹಗರಣಗಳ ಮೂಲ ಯಾವುದು?
ಹಣ, ಗಣ.

ವಿ. ಹೇಮಂತಕುಮಾರ್, ಬೆಂಗಳೂರು
ಸಹೋದ್ಯೋಗಿಯೊಬ್ಬರ ವಿವಾಹ ವಾರ್ಷಿಕೋತ್ಸವಕ್ಕೆ ಉಡುಗೊರೆಯಾಗಿ ಯಾವ ಪುಸ್ತಕ ನೀಡಲಿ?



ನಿಮ್ಮ ಸಹಿ ಹಾಕಿದ ಚೆಕ್ ಪುಸ್ತಕವೇ ಅತ್ಯುತ್ತಮ.

ಸೀಮಂತಿನಿ ದೇಸಾಯಿ, ಬೆಂಗಳೂರು
ಪ್ರಶ್ನೆ ಕೇಳುವುದು ಶುರುವಾದದ್ದು ಯಾವಾಗ ಮತ್ತು ಯಾರಿಂದ?
ಈವ್‌ಳಿಂದ. ಆಡಮ್‌ನನ್ನು ಕಂಡಾಗ. ‘ನೀನ್ಯಾಕ್ಕೀಗಿದ್ದೀಯ?’ ಮೊದಲ ಪ್ರಶ್ನೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಹೆಣ್ಣಿಗೆ ಕಟ್ಟುವ ತಾಳಿಗೆ ಕರಿಮಣಿ ಏಕೆ ಮುಖ್ಯ?
ಅದು ಪೋಕರಿಯನ್ನು ನೌಕರಿ ಚಾಕರಿಗಿಳಿಸಿ ಕುಟುಂಬೀಕರಿಸುವ ಮಣಿಯಂತೆ.

■ ರಾಮ್